

"ಮೇಶೆರ್ಲಿ, ಆಪಕಾ ಟೂರಿಸ್ಟ್ ಗೈಡ್" ಎಂದು ಹಿಂದಿಯಲ್ಲಿ ಮಾತು ಶುರು ಮಾಡಿದ ಹುಡುಗಿ ಕಣ್ಣು ಮಿಟುಕಿಸಿ ಬಾಗಿ ಬಳುಕಿ, ತನ್ನ ಕೈಯಲ್ಲಿರುವ ಕೆಂಪು ಬಣ್ಣದ ಬಾವುಟವನ್ನು ಅತ್ತಿತ್ತ ಅಲುಗಾಡಿಸಿ, ಚೀನಾದ ಚರಿತ್ರೆಯನ್ನು ಇಂಗ್ಲಿಷಿನಲ್ಲಿ ಹೇಳತೊಡಗಿದಳು. ಬೆಂಗಳೂರಿನಿಂದ ಚೀನಾ ನೋಡಲು ಬಂದು ಬಸ್ಸಿನಲ್ಲಿ ಕೂತ ಪ್ರವಾಸಿಗರು ಅವಳು ಹೇಳಿದ್ದನ್ನು ಅರಗಿಸಿಕೊಳ್ಳಲು ಒದ್ದಾಡುತ್ತಿದ್ದರು. ಅಲ್ಲದೆ, ಇವರ ಚರಿತ್ರೆ ಯಾರಿಗೆ ಬೇಕಾಗಿದೆ? ಶೆರ್ಲಿ ತನ್ನ ಮಾತನ್ನು ಮುಂದುವರಿಸಿ ಚೀನಾದಲ್ಲಿ ಕಮ್ಯೂನಿಸ್ಟ್ ಪಾರ್ಟಿಯ ಹುಟ್ಟು ಮತ್ತು ಮಾವೋನ ಕೊಡುಗೆಯನ್ನು ಹಾವ ಭಾವದೊಡನೆ ಬಣ್ಣಿಸುತ್ತಿದ್ದಳು. ಅವಳ ಇಂಗ್ಲಿಷ್ ಶಬ್ದಗಳು ಮತ್ತು ಗ್ರಾಮರ್ ಸರಿಯಾಗಿದ್ದರೂ ರಾಗವಾಗಿ ಮೂಗಿನಲ್ಲಿ ಮಾತನಾಡುವಾಗ ನಗು ಬರುತ್ತಿತ್ತು.

ಬಸ್ಸು ಬೀಜಿಂಗಿನ 'ಟಿನಮನ್ ಸ್ಕೇರ್'ನ ಮುಂದೆ ನಿಂತಿತು. ಅದರ ಇತಿಹಾಸವನ್ನು ಸೂಕ್ಷ್ಮವಾಗಿ ಹೇಳಿ, ಎಲ್ಲರಿಗೂ ಎರಡು ಗಂಟೆ ಸಮಯ ನೀಡಿ, ಮತ್ತೆ ಅಲ್ಲಿಗೇ ಬಂದು ಸೇರಲು ಹೇಳಿದಳು. ಜಾತ್ರೆಯಂತೆ ನೆರೆದಿದ್ದ ಹತ್ತಾರು ದೇಶಗಳ ಸಾವಿರಾರು ಜನರೊಂದಿಗೆ ನನ್ನೊಡನೆ ಬಂದವರು ಹೆಜ್ಜೆ ಹಾಕಿ ಮುಂದೆ ಸಾಗಿದರು. ನಾನಲ್ಲೇ ನಿಂತೆ. ಎಲ್ಲೆಲ್ಲೂ ಕೆಂಪು ಬಣ್ಣದ ಕಟ್ಟಡಗಳು, ಸುಮಾರು 600 ವರ್ಷಗಳಷ್ಟು ಹಳೆಯ ಇತಿಹಾಸವನ್ನು ಪ್ರಮುಖವಾಗಿ ಸಾರುತ್ತಿವೆ. ಅರಸೊತ್ತಿಗೆ, ಅದಕ್ಕಾಗಿ ಮಾರಾಮಾರಿ, ಹರಿದ ರಕ್ತದ ಹೊಳೆ, ಮಿಲಿಟರಿ ಆಡಳಿತ ಎಲ್ಲವೂ ಒಂದೊಂದಾಗಿ ಕಣ್ಣೆದುರಿಗೆ ಬಂದವು. ಅಷ್ಟರಲ್ಲಿ ಹಿಂದಿನಿಂದ ಯಾರೋ ತಳ್ಳಿದಂತಾಯಿತು. ಮುಗ್ಗರಿಸಿ ಬೀಳುವುದರಲ್ಲಿದ್ದ ನನ್ನನ್ನು ಶೆರ್ಲಿ ಹಿಡಿದುಕೊಂಡು ಬದಿಗೆ ಕರೆದುಕೊಂಡು ಹೋದಳು. ಅವಳು ಹಚ್ಚಿದ ಸೆಂಟಿನೊಡನೆ ಮತ್ತೇನೋ ವಾಸನೆ ಬಂದ ಹಾಗಾಯಿತು. "ಹೇ... ನಿಮ್ಮಲ್ಲಿ ಹಾವು, ನಾಯಿ, ಜಿರಳೆ ತಿನ್ನುವವರೂ ಇದ್ದಾರೆಯೇ?" ಕೇಳಿದೆ. ಅವಳೋ ಕೂಲಾಗಿ, "ಏಕೆ? ನನ್ನ ಅಮ್ಮ ಹಾವಿನ ಕರಿಯನ್ನು ಚೆನ್ನಾಗಿ ಮಾಡುತ್ತಾರೆ,